ದಿವಾಳಿಯಾದ ಡಿಕ್ರೀ ದೇಣೇದಾರ ಮುಳಬಾಗಲ್ ಕಸಬಾದಲ್ಲಿರುವ ದರಗಾ ಮುಜಾವರ್ ಷಂಷುದ್ದೀ ವಿಷಯದಲ್ಲಿ—

ಸ್ರ್ 1889ನೇ ಇಸವಿ ದಿವಾಳಿ ಕೇಸ್ ನಂಬರ್ 758.

ಹುಕುಂ.

ಮೇಲ್ಕಂಡ ಮುಜಾವರ್ ಷಂಷುದ್ದೀನನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ಮೆ|| ಎಲ್. ಅನಂತಸ್ವಾಮಿಯಾರ ರೂಬರೂ ಅರ್ಜೀದಾರನಾದ ಷಂಷುದ್ದೀನನ ಪರವಾಗಿ ಪ್ಲೀಡರ್ ಕೇಪಗಿರಯ್ಯನವರನ್ನೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ಯಾರುನ್ನೂ ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಷಂಷುದ್ದೀನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತಾಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ್ 1889ನೇ ಇಸವಿ ನವೆಂಬರ್ 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

| ನಂಬರು. | ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬೆಂದ ಅವರುಗಳ ವಾಸಸ್ಥಳ. | ಮೊಬಲಗು. | ಯಾವಾಗ ದಸ್ತಖತ್ ಮಾಡಿದರು. | ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಯಿದ್ದರೆ. | ಟಿಪ್ಪಣಿ. |
|---|---|---|---|---|---|
| 1 | ಮುಳಬಾಗಲ್ಲಿ ಇರತಕ್ಕ ಸೈದಹಾಜಿ ಮೈನರ್, ಗಾರ್ಡಿಯ್ಯ ನಂನ್ಮೊಬಿ ಹುರ್ಕೇಬಿ .. | 97—1—5 | 1887 | ಕೋಲಾರ ಮುನಸಿಳಿ ಕೋರ್ಟು 1887ನೇ ಇಸವಿ ಅರಜಿನಲ್ 645ನೇ ನಂಬರ್ ಡಿಕರೀ ಬಾಬತು ಮೊಬಲಗು. | |
| 2 | ಮುಳಬಾಗಲ್ ತಾಲ್ಲೂಕಿಗೆ ಗವರ್ಮೆಂಟಿಗೆ — | 60—0—0 | ಡಿಟೋ. | ಕಂದಾಯದ ಬಾಕಿ. | |
| | | 157—1—5 | | | |

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

## ಮೈಸೂರು ಡಿಸ್ಟ್ರಿಕ್ಟು.

### ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 249.

ಮೃತಪಟ್ಟ ಮಲ್ಲಿಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬಸಪ್ಪ ಮೈನರ್, ಗಾರ್ಡಿಯ್ಯ ಅಜ್ಜ ಪುಟ್ಟಮ್ಮನು, ಮೃತಪಟ್ಟ ಸದರೀ ಮಲ್ಲಿಂಣನವರಿಗೆ ಮೈನರ್, ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾ|| ಇಬ್ಬುಜಾಲ್ ಗ್ರಾಮ ಸ್ಥಳದ ಸದರೀ ಪುಟ್ಟಮ್ಮನವರು ಸದರೀ ವಾಸಸ್ಥನಾಗಿ ಮೃತಪಟ್ಟಮಲ್ಲಿಂಣನವರ ಜೊಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಿಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

---

1889ನೇ ಇಸವಿ ಅರ್ಜೀ ನಂಬರ್ 252.

ಮೃತಪಟ್ಟ ಚಂಬಗಾಲ್ ಸುಬ್ಬಾಚಾರ್ರ ಆಸ್ತೀವಿಷಯದಲ್ಲಿ—

ಅರ್ಜೀದಾರ್ರು ಕೇಪಗಿರಿ ಆಚಾರ್ರು, ಮೃತಪಟ್ಟ ಸದರೀ ಸುಬ್ಬಾಚಾರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇಸ್ಥಳದ ಸದರೀ ಕೇಪಗಿರಿ ಆಚಾರ್ರು ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬಾಚಾರ್ರ ಜೊಂದಗಿ ಬಗ್ಯಾಗಿ ಬರತಕ್ಕ 1000 ರೂಪಾಯಿ